# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ : ಬೆಂಅಪ್ರಾ/ನಯೋಸ/CON-910/ 9144 /2016-17.
No.

ದಿನಾಂಕ : 16/11/16
Date :

ಇವರಿಗೆ,
ಜಿಲ್ಲಾಧಿಕಾರಿಗಳು,
ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ಜಿಲ್ಲೆ,
ಬೆಂಗಳೂರು.

ಮಾನ್ಯರೇ,

ವಿಷಯ:- ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಹೂಡಿ ಗ್ರಾಮದ ಸರ್ವೆ ನಂ.86/1ಎ ರಲ್ಲಿ 3-10.08 ಎಕರೆ/ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಕೊಡುವಂತೆ ಕೋರಿ ಶ್ರೀಮತಿ.ಟಿ.ರತ್ನಮ್ಮ, ಪ್ರ.ರಮೇಶ್, ವಿಜಯಕುಮಾರ್ ರವರ ಅರ್ಜಿ ಬಗ್ಗೆ.

ಉಲ್ಲೇಖ:-
1) ತಮ್ಮ ಕಛೇರಿ ಪತ್ರದ ಸಂಖ್ಯೆ:ಎಎಲ್ಎನ್(ಪೂ.ಕೆ.ಹೆಚ್.ಹುಬ್ಬಳ್ಳಿ) ಎಸ್.ಆರ್/25/2016-17, ದಿನಾಂಕ:3/11/2016 (ಸ್ವೀಕೃತ ದಿನಾಂಕ: 19/10/2016)
2) ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ [National Green Tribunal] Original application No-222/2014 ಗೆ ಸಂಬಂಧಿಸಿದಂತೆ ದಿನಾಂಕ:04/05/2016 ರಲ್ಲಿ ನೀಡಿರುವ ತೀರ್ಪು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳವರ ಅರೆ ಸರ್ಕಾರಿ ಪತ್ರದ ಕ್ರಸಂ-ನಅಇ/227/ಬೆಂಅಪ್ರಾ/2016, ದಿನಾಂಕ :17/05/2016.

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿ ಪತ್ರದೊಂದಿಗೆ ತಾವು ಲಗತ್ತಿಸಿರುವ ಸರ್ವೆ ಸ್ಕೆಚ್ ಆಧಾರದ ಮೇಲೆ ಪರಿಶೀಲಿಸಲಾಗಿ ಸರ್ಕಾರದಿಂದ ದಿನಾಂಕ:25/06/2007 ರಂದು ಅನುಮೋದನೆಗೊಂಡಿರುವ RMP-2015 ರಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಹೂಡಿ ಗ್ರಾಮದ ಸರ್ವೆ ನಂ.86/1ಎ ರಲ್ಲಿ 3-10.08 ಎಕರೆ/ಗುಂಟೆ ವಿಸ್ತೀರ್ಣದ ಪ್ರದೇಶವನ್ನು Residential (Mian) ಗಾಗಿ ವರ್ಗೀಕರಿಸಿದೆ. ಒಟ್ಟಾರೆ ಪ್ರದೇಶದ ಪೈಕಿ 1217.48 ಚ.ಮೀ ಪ್ರದೇಶವು Transport and utilities perimeter ನಲ್ಲಿ ಬರುತ್ತಿದೆ.

**ಪ್ರಸ್ತಾಪಿತ ಪ್ರದೇಶವು ಕೆರೆಗೆ ಅಥವಾ ನಾಲಾಗೆ ಲಗತ್ತಾಗಿದ್ದಲ್ಲಿ ಅಥವಾ ಪ್ರಶ್ನಿತ ಜಮೀನಿನಲ್ಲಿ ಕೆರೆ/ನಾಲಾ ಹಾದು ಹೋಗಿದ್ದಲ್ಲಿ, ಸದರಿ ಕೆರೆ/ನಾಲಾದ ಅಂಚಿನಿಂದ ಅಳವಡಿಸಬೇಕಾದ Buffer zone [No development zone] ಗೆ ಕುರಿತಂತೆ ಉಲ್ಲೇಖಿ (2) ರಲ್ಲಿ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯು** ನೀಡಿರುವ ತೀರ್ಪಿನಂತೆ ಹಾಗೂ ಉಲೇಖಿ (3) ರ ಅರೆ ಸರ್ಕಾರಿ ಪತ್ರದ ಸೂಚನೆಯಂತೆ ಕೆರೆ/ನಾಲಾಗೆ ಅಗತ್ಯವಿರುವ ಬಫರ್ ಜಾಗವನ್ನು ಕಾಯ್ದಿರಿಸುವ ಷರತ್ತಿನೊಂದಿಗೆ, ಸದರಿ ಜಮೀನಿನಲ್ಲಿ ಇತರೇ ಖರಾಬು ಜಾಗ ಇದ್ದಲ್ಲಿ ಸದರಿ ಖರಾಬನ್ನು ಹೊರತು ಪಡಿಸಿ, Transport and utilities perimeter ನಲ್ಲಿ ಬರುತ್ತಿರುವ ಸುಮಾರು 1217.48 ಚ.ಮೀ ಪ್ರದೇಶವನ್ನು ಹೊರತುಪಡಿಸಿ, ಉಳಿಕೆ ಸುಮಾರು 11985.28 ಚ.ಮೀ ಜಾಗವನ್ನು ಸಾರ್ವಜನಿಕ ರಸ್ತೆ ಸಂಪರ್ಕ ಇದ್ದಲ್ಲಿ ಮಾತ್ರ ವಾಸದ ಉದ್ದೇಶಕ್ಕೆ ಪರಿಶೀಲಿಸಬಹುದಾಗಿದೆ.

2—



Scanned by CamScanner

ಈ ಜಮೀನು ಪ್ರಾಧಿಕಾರದ ಯಾವುದೇ ಯೋಜನೆಯ ಅಥವಾ ಬಡಾವಣೆಯ ಭಾಗವಾಗಿದ್ದಲ್ಲಿ ಈ ಅಭಿಪ್ರಾಯವು ಅನ್ವಯಿಸುವುದಿಲ್ಲ ಈ ಜಮೀನಿನಲ್ಲಿ ಹಾಲಿ ಅನಧಿಕೃತ ಬಡಾವಣೆ / ಕಟ್ಟಡಗಳಿದ್ದಲ್ಲಿ ಸಕ್ರಮಗೊಳಿಸಲು ನೀಡಿರುವ ಅಭಿಪ್ರಾಯವಾಗಿರುವುದಿಲ್ಲವೆಂಬ ಷರತ್ತಿಗೊಳಪಟ್ಟಿದೆ. ಆದರೆ ಈ ಪತ್ರವು ಭೂ ಉಪಯೋಗದ ಮಾಹಿತಿ ನೀಡುವ ಪತ್ರ ಮಾತ್ರವಾಗಿದ್ದು, ನಿರಾಕ್ಷೇಪಣಾ ಪತ್ರವಲ್ಲವೆಂದೂ ಹಾಗೂ ಮಾಲೀಕತ್ವದ ದಾಖಲೆಗೆ ಸಂಬಂದಿಸಿರುವುದಿಲ್ಲವೆಂದೂ ಸಹ ಈ ಮೂಲಕ ತಿಳಿಯಪಡಿಸಿದೆ. ಸರ್ವೆ ನಂ.86/1ಎ ರ ಜಮೀನಿನ ಭೂಸ್ವಾಧೀನತೆಯ ಬಗ್ಗೆ ಪ್ರತ್ಯೇಕವಾಗಿ ಮಾಹಿತಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂಸ್ವಾಧೀನ ವಿಭಾಗದಿಂದ ಹಾಗೂ ಇತರೆ ಭೂ ಸ್ವಾಧೀನ ಕಛೇರಿಗಳಿಂದ ಮಾಹಿತಿ ಪಡೆದು ಹಾಗೂ ಸದರಿ ಜಮೀನಿಗೆ ಹಾಲಿ ಸಾರ್ವಜನಿಕ ರಸ್ತೆ ಸಂಪರ್ಕ ಇರುವ ಬಗ್ಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ದೃಢೀಕರಣ ಪತ್ರ ಪಡೆದ ನಂತರವೇ ಪ್ರಸ್ತಾವನೆಯನ್ನು ಪರಿಶೀಲಿಸುವುದು ಸೂಕ್ತವೆಂದು ಅಭಿಪ್ರಾಯ ನೀಡಲಾಗಿದೆ.

ತಮ್ಮ ವಿಶ್ವಾಸಿ,

11/11/16

ಸಹಾಯಕ ನಿರ್ದೇಶಕರು
ನಗರ ಯೋಜನಾ ವಿಭಾಗ,
ಬೆಂಅಪ್ರಾ, ಬೆಂಗಳೂರು.

Scanned by CamScanner